ಹಾಸನ ನಗರದ ಸರ್ಕಾರಿ ಬಸ್ ನಿಲ್ದಾಣ

ಚುಕ್ಕೆ ಗುರುತಿನ ಪ್ರಶ್ನೆ ೨೬೮ (೬೭೬)

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ನಗರದ ಸರ್ಕಾರಿ ಬಸ್ ನಿಲ್ದಾಣದಲ್ಲಿ ಮಳೆಗಾಲದಲ್ಲಿ ನೀರು ನಿಂತು ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ;

ಇ) ನೀರು ನಿಲ್ಲುವುದನ್ನು ತಪ್ಪಿಸಲು ತೆಗೆದಂಕೊಂಡ ಕ್ರಮವೇನು ?

ಶ್ರೀ ಕೆ ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಬಂದಿದೆ.

ಆ) ಬಸ್ ನಿಲ್ದಾಣದ ನಿವೇಶನವು ಕೆರೆಯ ಅಂಗಳವಾದುದರಿಂದ ಹಾಗೂ ಸುಮಾರು ರಸ್ತೆಯು ಮಟ್ಟದಿಂದ ೧೦ ಅಡಿ ಕೆಳಗೆ ಇರುವುದರಿಂದ ಮಳೆಗಾಲದಲ್ಲಿ ನೀರು ಶೇಖರಣೆಯಾಗುತ್ತದೆ.

ಇ) ಬಸ್ ನಿಲ್ದಾಣದ ಆವರಣದಲ್ಲಿ ಚರಂಡಿಯನ್ನು ನಿರ್ಮಿಸಲಾಗಿದೆ. ನಗರಸಭೆ ಹಾಗೂ ಸಾರಿಗೆ ಸಂಸ್ಥೆಯವರು ಜೊತೆಗೂಡಿ ದೊಡ್ಡ ಪ್ರಮಾಣದ ಚರಂಡಿಯನ್ನು ನಿರ್ಮಿಸುವ ಯೋಜನೆಯು ಪರಿಶೀಲನೆಯಲ್ಲಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೆ, ಹಾಸನ ಬಸ್‌ಸ್ಟ್ಯಾಂಡಿನಲ್ಲಿ ಯಾವಾಗಲೂ ೩೦-೪೦ ಬಸ್ಸುಗಳು ಬರುತ್ತಿರುತ್ತವೆ, ಹೋಗುತ್ತಿರುತ್ತವೆ. ಹಾಸನದಲ್ಲಿ ಏನಾದರೂ ಮಳೆಯಾದರೆ ಬಸ್ ಸ್ಟ್ಯಾಂಡಿನಲ್ಲಿ ನಾಲ್ಕೈದು ಅಡಿಗಳು ನೀರು ನಿಲ್ಲುತ್ತದೆ. ಹೊದಸಾರಿ ಸೆಪ್ಟೆಂಬರ್ ತಿಂಗಳು ಎಂದು ಕಾಣುತ್ತದೆ, ಹಾಸನದಲ್ಲಿ ಎರಡು ಇಂಚು ಮಳೆಯಾದಾಗ ಆರು ಅಡಿ ನೀರು ಬಸ್ ಸ್ಟ್ಯಾಂಡಿನಲ್ಲಿ ನಿಂತು ಜನರು ಒಳಗೆ ಹೋಗುವುದಕ್ಕೆ ಹೊರಗೆ ಬರುವುದಕ್ಕೆ ಆಗಲಿಲ್ಲ. ಜನರು ಪಟ್ಟಂತಹ ಪಾಡನ್ನು ಹೇಳುವುದಕ್ಕಾಗುವುದಿಲ್ಲ, ಅದನ್ನು ಕವಿಯಲ್ಲಿ ಕೇಳುವುದಕ್ಕಾಗುವುದಿಲ್ಲ. ಹೆಂಗಸರು ಮಕ್ಕಳು ಮಳೆಯಲ್ಲಿ ನಿಂತುಕೊಂಡು, ಸಾರಿಗೆ ಸಂಸ್ಥೆಗೆ ಶಾಪವನ್ನು ಹಾಕುತ್ತಿದ್ದರು. ಅಂತಹ ಜಾಗದಲ್ಲಿಕ್ಕೆ ಸಾರಿಗೆ ಸಂಸ್ಥೆಯವರು ಬಸ್ ಸ್ಟ್ಯಾಂಡ್ ಮಾಡಿ ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಮಳೆಗಾಲದಲ್ಲಿ ಇದು ಯಾವಾಗಲೂ ನಡೆಯುತ್ತಿರುತ್ತದೆ. ಜನರು ಕಣ್ಣೀರು ಹಾಕಿಕೊಂಡು ಸಾರಿಗೆ ಸಂಸ್ಥೆಗೆ ಶಾಪ ಹಾಕುತ್ತಿರುತ್ತಾರೆ ಕಳೆದ ಏಳೆಂಟು ವರ್ಷಗಳಿಂದ ಇದು ನಡೆಯುತ್ತಿದೆ, ಮಳೆ ಬಂದಾಗ ಬಸ್ ಸ್ಟ್ಯಾಂಡಿನಲ್ಲಿ ನೀರು ನಿಂತು ಜನ ಒಳಗೆ ಹೋಗುವುದಕ್ಕೆ ಹೊರಗೆ ಬರುವುದಕ್ಕೆ ಆಗುವುದಿಲ್ಲ. ಆಗಿನಿಂದ ಸರ್ಕಾರಕ್ಕೆ ಒತ್ತಾಯ ಮಾಡಿಕೊಂಡು ಬಂದಿದ್ದೇವೆ. ಅಲ್ಲಿ ನಿಂತುಕೊಳ್ಳುತಕ್ಕ ನೀರನ್ನು ಬೇರೆ ಕಡೆ ಕಳುಹಿಸಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿದ್ದೇವೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಏನೂ ಉತ್ತರ ಕೊಟ್ಟಿದ್ದಾರೆಂದರೆ, ಆ ಬಗ್ಗೆ ಎಸ್ಟಿಮೇಟ್ ಮಾಡುತ್ತಿದ್ದೇವೆ, ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆ. ಆ ನೀರನ್ನು ಬೇರೆ ಕಡೆ ಕಳುಹಿಸಲಿಕ್ಕೆ ಯಾವಾಗ ಡ್ರೈನೇಜ್ ಮಾಡುತ್ತೀರಿ ? ಪರಿಶೀಲನೆ ಮಾಡುವುದೂ ಯಾವಾಗ ? ಅಲ್ಲಿ ಪ್ಯಾಸೆಂಜರ್ಸ್‌ಗೆ ತೊಂದರೆಯಾಗುತ್ತಿದೆ. ಮಳೆ ಬಂದು ನೀರು ನಿಂತುಕೊಂಡರೆ ನೀರು ಖಾಲಿಯಾಗುವುದಕ್ಕೆ ಐದಾರು ಗಂಟೆಯಾಗುತ್ತದೆ. ಆಗ ಜನರು ಹೊರಗೆ ಬರುವುದಕ್ಕೆ ಆಗುವುದಿಲ್ಲ. ಒಳಗೆ ಹೋಗುವುದಕ್ಕೆ ಆಗುವುದಿಲ್ಲ. ಜನರು ಅಲ್ಲೇ ನಿಂತುಕೊಳ್ಳುತ್ತಾರೆ. ಬಸ್ ಸ್ಟ್ಯಾಂಡಿನಲ್ಲಿ ಆಗತಕ್ಕ ತೊಂದರೆಯನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಜನರಿಗೆ ಬಹಳ ಬೇಸೆಯಾಗುತ್ತದೆ. ಮಾನ್ಯ ಸಚಿವರು ಖಂಡಿತವಾಗಿಯೂ ಹೇಳಬೇಕು, ಅದನ್ನು ಯಾವಾಗ ಸರಿಮಾಡಿಸುತ್ತೀರಿ ? ಕೆಲಸಮಾಡಿ ಯಾವಾಗ ಮುಗಿಸುತ್ತೀರಿ ಎಂದು ಹೇಳಬೇಕು.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಹಾಸನ ಬಸ್‌ಸ್ಟ್ಯಾಂಡ್ ಅನ್ನು ನಿಜವಾಗಿಯೂ ಒಂದು ಕೆರೆಯಲ್ಲಿ ಕಟ್ಟಿದ್ದಾರೆ. ಅದು ಸುಮಾರು ೧೦ ಅಡಿ ಆಳದಲ್ಲಿದೆ.

ಅಧ್ಯಕ್ಷರು.—ಇನ್ನೂ ಹೆಚ್ಚು ಆಳವಾದ ಪ್ರದೇಶ ಅವರಿಗೆ ಸಿಗಲಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಜೆ. ಜಾರ್ಜ್.—ಮೊದಲು ನೀರು ಡ್ರೈನೇಜ್‌ನಲ್ಲಿ ಹೋಗುತ್ತಿತ್ತು. ಆದರೆ ಈಗ ಡ್ರೈನೇಜ್ ಮುಚ್ಚಿಕೊಂಡಿದೆ. ಮಳೆ ಬಂದಾಗ ಕೆರೆ ತುಂಬಿ ಬ್ಯಾಕ್‌ವಾಟರ್ ಬಸ್ ಸ್ಟ್ಯಾಂಡಿನಲ್ಲಿ ನಾಲ್ಕೈದು ಅಡಿ ನಿಂತುಕೊಳ್ಳುತ್ತದೆ. ನಾನು ಹಾಸನಕ್ಕೆ ಭೇಟಿ ಕೊಟ್ಟಿದ್ದಾಗ ಇನ್‌ಸ್ಪೆಕ್ಷನ್

ಮಾಡಿದ್ದೇನೆ. ನಾವೇನೂ ಮಾಡುವುದಕ್ಕಾಗುವುದಿಲ್ಲ. ಬೇರೆ ಡೈನೇಜ್ ಮಾಡಿ, ಆ ನೀರನ್ನು ಬೇರೆ ಕಡೆ ಹೋಗುವ ಹಾಗೆ ಮಾಡಬೇಕು. ನಾನು ಅಲ್ಲಿಗೆ ಹೋಗಿದ್ದಾಗ ಚಿಲ್ಲಾಧಿಕಾರಿಗಳು ನನ್ನ ಜೊತೆಯಲ್ಲಿದ್ದರು. ಅವರು ಪುರಸಭೆಯ ಆಡ್ಮಿನಿಸ್ಟ್ರೇಟರ್ ಸಹ ಆಗಿದ್ದರು. ಹೊಸ ಡ್ರೈನೇಜ್ ಮಾಡಲಿಕ್ಕೆ ೧೨–೧೫ ಲಕ್ಷ ರೂಪಾಯಿಗಳಾಗುತ್ತವೆಂದು ಅವರು ಹೇಳಿದರು. ಈಗೇನು ಎಸ್ಟಿಮೇಟ್ ಮಾಡಿದ್ದಾರೆ, ಅದರಲ್ಲಿ ಶೇಕಡ ೫೦ರಷ್ಟು ಹಣವನ್ನು ಸಾರಿಗೆ ಸಂಸ್ಥೆಯವರು ಕೊಡಬೇಕೆಂದು ಕೇಳಿದರು. ನಾನು ನಮ್ಮ ಅಧಿಕಾರಿಗಳಿಗೆ ಆ ಹಣ ಕೊಡಲಿಕ್ಕೆ ಹೇಳಿದ್ದೇನೆ. ಮಳೆಗಾಲ ಶುರುವಾಗುವುದರೊಳಗೆ ಕೆಲಸವಾಗಬೇಕು, ನಾವು ಶೇಕಡ ೫೦ರಷ್ಟು ಹಣವನ್ನು ಕೊಡುತ್ತೇವೆ. ಈಗ ೧೨ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾರೆ. ಎಸ್ಟಿಮೇಟನ್ನು ಜಾಸ್ತಿ ಮಾಡಿದರೆ ೨೦–೨೫ಲಕ್ಷ ರೂಪಾಯಿಗಳನ್ನು ಮಾಡಿದರೆ, ಅದರಲ್ಲಿ ೫೦ ಪರ್ಸೆಂಟ್ ಕೊಡುವುದಕ್ಕಾಗುವುದಿಲ್ಲ. ಈಗೇನು ಪುರಸಭೆಯವರು ೧೨ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾರೆ ಅದರಲ್ಲಿ ೫೦ ಪರ್ಸೆಂಟ್ ಸ್ಪೆಷಲ್ ಕೇಸ್ ಆಗಿ ಕೊಡಲಿಕ್ಕೆ ನಾನು ನಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಆ ಜಾಗವನ್ನು ಸಾರಿಗೆ ಸಂಸ್ಥೆಗೆ ಪುರಸಭೆಯವರು ಪುಕ್ಕಟೆ ಕೊಟ್ಟಿದ್ದಾರೆ. ಈಗ ಅದರ ಬೆಲೆ ೬೦–೭೦ ಲಕ್ಷ ರೂಪಾಯಿಗಳಾಗುತ್ತವೆ. ಒಂದು ನಯಾಪೈಸೆ ಕೂಡ ತೆಗೆದುಕೊಂಡಿಲ್ಲ.

ಶ್ರೀ ಕೆ.ಜೆ. ಜಾರ್ಜ್.—ಕೆರೆಯನ್ನು ಕೊಟ್ಟಿದ್ದೀರಿ,

ಅಧ್ಯಕ್ಷರು.—ಪುಕ್ಕಟೆಯಾಗಿ ಜಾಗವನ್ನು ಕೊಟ್ಟಿದ್ದೀರಿ. ಅದರ ಫಲವನ್ನು ಈಗ ನೀವೇ ಉಣ್ಣುತ್ತಿದ್ದೀರಿ ಅಲ್ಲವೇ ?

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಮಂತ್ರಿಗಳು ನಾವು ಶೇಕಡ ೫೦ರಷ್ಟು ಹಣವನ್ನು ಕೊಡುವುದಕ್ಕೆ ತಯಾರಾಗಿದ್ದೇವೆಂದು ಹೇಳುತ್ತಾರೆ. ಆದರೆ ಅವರ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಹತ್ತಿರ ೩ ತಿಂಗಳ ಹಿಂದೆ ನಾವು ಹೋಗಿ ಕೇಳಿದಾಗ, ಅಷ್ಟೆಲ್ಲ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆಗಲೇ ಅವರು ಕೊಡುವುದಕ್ಕೆ ಒಪ್ಪಿಕೊಂಡಿದ್ದರೆ ಇಷ್ಟು ಹೊತ್ತಿಗೆ ಕೆಲಸ ಕಂಪ್ಲೀಟ್ ಆಗುತ್ತಿತ್ತು. ಈಗ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಹಿಂದೆ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಏತಕ್ಕೆ ಒಪ್ಪಲಿಲ್ಲವೋ ಗೊತ್ತಿಲ್ಲ. ಈಗ ಹಣ ಕೊಡುತ್ತೇವೆಂದು ಹೇಳುತ್ತಾರೆ. ಆವರ ಹತ್ತಿರ ದುಡ್ಡು ಇರುವುದಿಲ್ಲ. ನೀವು ಹಣವನ್ನು ಯಾವಾಗ ಕೊಡುತ್ತೀರಿ ? ನೀವು ಕೊಟ್ಟ ತಕ್ಷಣ ಮುನಿಸಿಪಾಲಿಟಿಯವರು ಅವರ ಭಾಗದ ಹಣ ಕೊಟ್ಟು ಕೆಲಸ ಶುರು ಮಾಡಿಸುತ್ತಾರೆ.

ಶ್ರೀ ಕೆ.ಜೆ. ಜಾರ್ಜ್.—ಈಗಾಗಲೇ ಹಣ ಬಿಡುಗಡೆ ಮಾಡುವುದಕ್ಕೆ ನಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಮುನಿಸಿಪಾಲಿಟಿಯವರು ಯಾವಾಗ ಬೇಕಾದರೂ ಕೇಳಲಿ, ನಾವು ಹಣ ಕೊಡುತ್ತೇವೆ. ಈಗ ನಮಗೆ ಅಷ್ಟೇನೂ ಹಣದ ತೊಂದರೆಯಿಲ್ಲ.

ಶ್ರೀಮತಿ ಚಂದ್ರಪ್ರಭ ಅರಸ್.—ಮಾನ್ಯ ಅಧ್ಯಕ್ಷರೆ, ಈ ಬಸ್ ನಿಲ್ದಾಣಗಳು ಅನೇಕ ವರ್ಷಗಳ ಹಿಂದೆ ನಿರ್ಮಾಣವಾದಂತಹವುಗಳು. ಅವು ಬಹಳ ಇಕ್ಕಟ್ಟಾದ ಜಾಗಗಳಲ್ಲಿವೆ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಜನಸಂದಣಿ ಒತ್ತಡ ಪ್ರತಿನಿತ್ಯ ಇರುವುದರಿಂದ ಅವುಗಳನ್ನು ಸುಧಾರಿಸಬೇಕಾಗಿದೆ. ಈಗಿರತಕ್ಕ ಕಟ್ಟಡಗಳಿಗೆ ಸುಣ್ಣಬಣ್ಣ ಏನೂ ಮಾಡಿರುವುದಿಲ್ಲ. ದುರಸ್ತಿ ಮಾಡಿ ನವೀಕರಣಗೊಳಿಸಿರುವುದಿಲ್ಲ. ಬಸ್ ನಿಲ್ದಾಣಗಳಲ್ಲಿ ಶೌಚಾಲಯ ಇನ್ನಿತರ ಸೌಕರ್ಯಗಳನ್ನು ಸಾರ್ವಜನಿಕರಿಗೆ ಒದಗಿಸಿಕೊಡುವುದಕ್ಕೆ ಇಲಾಖೆಯವರು ಗಮನಹರಿಸುತ್ತೀರಾ? ಮತ್ತು ಪ್ರಯಾಣಿಕರ ಸಂಖ್ಯೆ ಹೆಚ್ಚಿಗೆ ಇರುವುದರಿಂದ ಇದನ್ನು ದುರಸ್ತಿ ಮಾಡಲಿಕ್ಕೆ ಮತ್ತು ಮೇಂಟನ್ಸ್ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಬಯಸುತ್ತೇನೆ.

ಅಧ್ಯಕ್ಷರು.—ಇದು ಹಾಸನ ಬಸ್‌ಸ್ಟ್ಯಾಂಡ್‌ಗೆ ಸಂಬಂಧಪಟ್ಟಿದ್ದಲ್ಲ ದು. ನೀವು ಜನರಲ್ ಆಗಿ ಕೇಳುತ್ತಿದ್ದೀರಿ. ಪ್ರೊ. ನಂಜುಂಡಸ್ವಾಮಿಯವರೇ, ನಿಮ್ಮ ಪ್ರಶ್ನೆ (೮೨೭)ಯನ್ನು ಡಿ.ಪಿ.ಎ.ಆರ್.ಗೆ ಟ್ರಾನ್ಸ್‌ಫರ್ ಮಾಡಲಾಗಿದೆ.

ಪ್ರೊ: ಎಂ. ಡಿ. ನಂಜುಂಡಸ್ವಾಮಿ.—ನನ್ನ ಪ್ರಶ್ನೆಗಳಿಗೆ ಗ್ರಹಗತಿ ಸರಿಯಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು.—ಟ್ರಾನ್ಸ್‌ಫರ್ ಆದ ಪ್ರಶ್ನೆಗಳಿಗೆ ಮೊದಲ ಆದ್ಯತೆ ಕೊಟ್ಟು ಪಟ್ಟಿಯಲ್ಲಿ ಸೇರಿಸುತ್ತೇವೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ.—ಇದೇ ಸೆಶನ್‌ನಲ್ಲಿ ?

MR. SPEAKER.—Hopefully